**ದಿನಾಂಕ:02-04-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**
**ಪಾಟೀ ಸವಾಲು: ಆರೋಪಿಯ ಪರ ಶ್ರೀ. ಎಸ್. ಕೆ, ವಕೀಲರಿಂದ:-**

1. ನಾನು 10ನೇ ತರಗತಿಯವರೆಗೆ ವಿದ್ಯಾಭ್ಯಾಸವನ್ನು ಮಾಡಿದ್ದೇನೆ. ನಾನು ವೃತ್ತಿಯಲ್ಲಿ ವ್ಯವಸಾಯ ಮತ್ತು ಚಾಲಕನಾಗಿ ಕೆಲಸವನ್ನು ಮಾಡುತ್ತೇನೆ. ನನ್ನ ಮಾಸಿಕ ಆದಾಯ ರೂ. 15 ಸಾವಿರ ಇದೆ. ನನಗೆ ಕಳೆದ 10 ವರ್ಷಗಳಿಂದ ಆರೋಪಿ ಮತ್ತು ಅವರ ಯಜಮಾನರ ಪರಿಚಯವಿದೆ. ದಿ.15-08-2023 ರಂದು ನಾನು ಆರೋಪಿಗೆ ಹಣವನ್ನು ನೀಡಿರುತ್ತೇನೆ. ದಿ.01-08-2023 ರಂದು ಆರೋಪಿಯು ನನ್ನ ಬಳಿ 5 ಲಕ್ಷ ಹಣವನ್ನು ಕೇಳಿದರು. ನಾನು ಆರೋಪಿಗೆ ನಗದು ರೂಪದಲ್ಲಿ ಹಣವನ್ನು ನೀಡಿರುತ್ತೇನೆ. ಆರೋಪಿ ಮತ್ತು ಅವರ ಯಜಮಾನರು ನನ್ನ ಮನೆಗೆ ಬಂದು ಹಣವನ್ನು ತೆಗೆದುಕೊಂಡರು. ಆರೋಪಿಯು ವ್ಯಾಪಾರ ಮತ್ತು ಅಂಗಡಿಯನ್ನು ಮಾಡುವ ಸಲುವಾಗಿ ನನ್ನಿಂದ ಹಣವನ್ನು ಪಡೆದುಕೊಂಡರು. ನಾನು ನನ್ನ ಬ್ಯಾಂಕ್ ಖಾತೆಯಲ್ಲಿ ಇದ್ದ 3 ಲಕ್ಷ ಹಣವನ್ನು ಡ್ರಾ ಮಾಡಿಕೊಂಡು ಬಂದು ಆರೋಪಿಗೆ ನೀಡಿರುತ್ತೇನೆ. ಆರೋಪಿಗೆ ಹಣವನ್ನು ಬ್ಯಾಂಕ್ ಖಾತೆಯ ಮೂಲಕ ವರ್ಗಾವಣೆ ಮಾಡಲು ನಿಮಗೆ ತೊಂದರೆ ಇತ್ತಾ ಎಂದರೆ ಸಾಕ್ಷಿಯು ಆರೋಪಿಯು ನಗದು ರೂಪದಲ್ಲಿ ಹಣ ಬೇಕು ಎಂದು ಕೇಳಿದ ಕಾರಣ ಹಣವನ್ನು ನಗದು ರೂಪದಲ್ಲಿ ನೀಡಿದ್ದೇನೆ ಎನ್ನುತ್ತಾರೆ. ಆರೋಪಿಯು ನನ್ನಿಂದ ಹಣವನ್ನು ಪಡೆದುಕೊಂಡ 1 ರಿಂದ 2 ತಿಂಗಳ ಒಳಗೆ ಮರು ಪಾವತಿ ಮಾಡುತ್ತೇನೆ ಎಂದು ಹೇಳಿದರು ಮತ್ತು ಸದರಿ ವಿಷಯವನ್ನು ಪಿರ್ಯಾದು ಮತ್ತು ನಿಪಿ-3 ರಲ್ಲಿ ಹೇಳಿರುತ್ತೇನೆ.

2. ನಾನು ಆರೋಪಿಗೆ ಹಣವನ್ನು ನೀಡಿದ ಸಮಯದಲ್ಲಿ ಆರೋಪಿಯು ನನಗೆ ಚೆಕ್ ನ್ನು ನೀಡಿರುವುದಿಲ್ಲ, ಆದರೆ ದಿ.11-12-2023 ರಂದು ಆರೋಪಿಯು ನನಗೆ ನಿಪಿ-1 ನ್ನು ನೀಡಿರುತ್ತಾರೆ. ನಾನು ಆರೋಪಿಯ ಮನೆಯ

ಹತ್ತಿರ ಹೋಗಿದ್ದಾಗ ಆರೋಪಿಯು ನನಗೆ ನಿಪಿ-1 ನ್ನು ನೀಡಿದರು. ದಿ.13-12-2023 ರಂದು ನಾನು ನಿಪಿ-1 ನ್ನು ನನ್ನ ಬ್ಯಾಂಕ್ ಖಾತೆಗೆ ಹಾಜರುಪಡಿಸಿರುತ್ತೇನೆ. ನಿಪಿ-1 ನ್ನು ನನ್ನ ಬ್ಯಾಂಕ್ ಖಾತೆಗೆ ಹಾಜರಪಡಿಸಿದಾಗ ಹಣ ಇರುವುದಿಲ್ಲ ಎಂದು ಹಿಂಬರಹವನ್ನು ನೀಡಿರುತ್ತಾರೆ. ನಾನು ಸದರಿ ವಿಷಯವನ್ನು ಆರೋಪಿಗೆ ತಿಳಿಸಿದಾಗ ಅವರು ತನ್ನ ಬ್ಯಾಂಕ್ ಖಾತೆಯಲ್ಲಿ ಹಣ ಇದೆ ಮತ್ತು ನನಗೆ ಚೆಕ್ ನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲು ತಿಳಿಸಿದರು. ನನ್ನ ಮತ್ತು ಆರೋಪಿಯ ನಡುವೆ ಬ್ಯಾಂಕ್ ಖಾತೆಯ ಮೂಲಕ ಯಾವುದೇ ವ್ಯವಹಾರವು ನಡೆದಿರುವು ದಿಲ್ಲ. ನನ್ನ ಮತ್ತು ಆರೋಪಿಯ ನಡುವೆ ಕೇವಲ ನಗದು ರೂಪದಲ್ಲಿ ಮಾತ್ರ ವ್ಯವಹಾರವು ನಡೆದಿರುತ್ತದೆ.

**ಮುಂದುವರೆದ ಪಾಟೀ ಸವಾಲಿಗೆ ಸಮಯಕೋರಿದ್ದು, ಸಮಯ ನೀಡಲಾಯಿತು.**

**ಓ. ಹೇ. ಕೇ. ಸ. ಇ. ಎ. ಓಪ್ಪಿರುತ್ತಾರೆ,**

**2 ನೇ ಅ. ನ್ಯಾ. ದಂ. ಮತ್ತು ಜೆಎಂಎಫ್‌ಸಿ,**

**ಮಾಗಡಿ**